**ಸಿ.ಸಿ.ನಂ.2171/2021**
**ಸಿಡಬ್ಲ್ಯು: 01 ಪಿಡಬ್ಲ್ಯು:01**

**ಮೇಃ ಹೆಚ್ಚುವರಿ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಸವನ-ಬಾಗೇವಾಡಿ**

ಸಾಕ್ಷಿದಾರರ ಹೆಸರು : ಸ್ವಪನೀಲ ಮಿರಜೆ
ತಂದೆ/ಗಂಡ ಹೆಸರು : ಗೈಬಿ
ವಯಸ್ಸು : 36 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಮಾಣೆವಾಡಿ

**ಸಾಕ್ಷಿಯನ್ನು ಇಂದು ದಿನಾಂಕಃ 07-07-2025. ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ**

**(ಸಾಕ್ಷಿ ಕನ್ನಡ ಬಾಷೆ ಬರದರಿಂದ ಮತ್ತು ಮರಾಠಿ ಮತ್ತು ಹಿಂದಿಯಲ್ಲಿ ಮಾತನಾಡುತ್ತಿದ್ದರಿಂದ ಶ್ರೀ.ಸಿ.ಟಿ.ಬಿ ವಕೀಲರನ್ನು ಅನುವಾದಕರು ಅಂತಾ ನೇಮಿಸಿಕೊಂಡು ಸಾಕ್ಷಿ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)**

1) ಚಾಸಾ-14 ಪರಿಚಯ ಇಲ್ಲ. 2 ನೇ ಆರೋಪಿ ಪರಿಚಯ. ಚಾಸಾ-9 ರವರ ಪರಿಚಯ ಇಲ್ಲ.

2) ಸುಮಾರು 4 ವರ್ಷಗಳ ಹಿಂದೆ ನಾನು, ಚಾಸಾ-6 ಮತ್ತು 2 ನೇ ಆರೋಪಿ ಸೇರಿ ಮಾಣೆವಾಡಿಯಿಂದ ಬೆಂಗಳೂರಿಗೆ ಟ್ರಕನಲ್ಲಿ ಈರುಳ್ಳಿಯನ್ನು ತುಂಬಿಕೊಂಡು ಹೋರಟಿದ್ದೇವು. ನಂತರ ಟ್ರಕನಲ್ಲಿ ಹೋಗುತ್ತಿರುವಾಗ ಹಿಂದಿನಿಂದ ಒಂದು ಕಾರು ಬಂದು ನಮ್ಮ ಟ್ರಕಿಗೆ ಡಿಕ್ಕಿ ಪಡಿಸಿತ್ತು. ಸದರಿ ಅಪಘಾತ ಮನಗೂಳಿಯಿಂದ ಸ್ವಲ್ಪ ದೂರದಲ್ಲಿ ಆಗಿತ್ತು. ನಂತರ ಸಾರ್ವಜನಿಕರು ಬಂದು ಕಾರನಲ್ಲಿ ಇದ್ದ ಚಾಲಕನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ಪೋಲಿಸರು ಬಂದು 2 ನೇ ಆರೋಪಿಯನ್ನು ವಿಚಾರಿಸಿದ್ದಾಗ 2 ನೇ ಆರೋಪಿ ಅಪಘಾತ ಕುರಿತು ಪೋಲಿಸರಿಗೆ ಮಾಹಿತಿ ನೀಡಿದ್ದಾ. ನಾನು ಏನು ಮಾಡಿರಲಿಲ್ಲ ನಮ್ಮ ಲಾರಿ ಹತ್ತಿರ ನಿಂತುಕೊಂಡಿದ್ದೆ. ನಾನು ಯಾವುದೇ ದೂರು ನೀಡಿರುವುದಿಲ್ಲ. ಪೋಲಿಸರು ನನ್ನನ್ನು ಮರುವಿಚಾರಣೆ ಮಾಡಿರುವುದಿಲ್ಲ ಪೋಲಿಸರು ಸ್ಥಳದಲ್ಲಿ ಒಕ್ಕಲುತನ ಮಾಡುವವರು ಯಾರು ಅಂತಾ ಕೇಳಿದ್ದಾಗ ನಾನು ಇದ್ದೇನೆ ಅಂತಾ ಹೇಳಿದ್ದಕ್ಕೆ ಪೋಲಿಸರು ಒಂದು ದಾಖಲೆಗೆ ಸಹಿ ಪಡೆದುಕೊಂಡಿದ್ದರು. ಸದರಿ ದಾಖಲೆಯನ್ನು ಪೋಲಿಸರು ಕನ್ನಡದಲ್ಲಿ ಬರೆದುಕೊಂಡಿರುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರೆದಿತ್ತು ಅಂತಾ ನನಗೆ ಮಾಹಿತಿ ಇಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾವು ಚಲಾಯಿಸಿಕೊಂಡು ಹೋಗುತ್ತಿದ್ದ ಟ್ರಕ ನೊಂದಣಿ ಸಂ.MH-13/3022

ಅಂತಾ ಇತ್ತು. ಹಿಂದಿನಿಂದ ಬಂದು ಡಿಕ್ಕಿ ಪಡಿಸಿದ ಕಾರಿನ ನೊಂದಣಿ ಸಂಖ್ಯೆ ಮಾಹಿತಿ ಇಲ್ಲ. ಸದರಿ ಕಾರು ಯಾರಿಗೆ ಸೇರಿದ್ದು ಮತ್ತು ಅದನ್ನು ಯಾರು ಚಲಾಯಿಸುತ್ತಿದ್ದರು ಅಂತಾ ಮಾಹಿತಿ ಇಲ್ಲ, ಆದರೆ ಸದರಿ ಕಾರಿನಲ್ಲಿ ಒಬ್ಬ ವ್ಯಕ್ತಿ ಮಾತ್ರ ಇದ್ದ.

3) ಈಗ ನಾನು ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇರುತ್ತದೆ, ಅದು ದೂರು ಆಗಿದ್ದು, ಅದನ್ನು ನಿಪಿ-8 ಎಂದು, ಅದರ ಮೇಲೆ ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

4) ಈಗ ನಾನು ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇರುತ್ತದೆ, ಅದು ಪ್ರ.ವ.ವ ವಾಗಿದ್ದು, ಅದನ್ನು ನಿಪಿ-9 ಎಂದು, ಅದರ ಮೇಲೆ ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

5) ದೂರಿನಲ್ಲಿ ಏನು ಬರೆದಿದ್ದೇ ಅಂತಾ ನನಗೆ ಮಾಹಿತಿ ಇಲ್ಲ. ಪ್ರಕರಣ ಕುರಿತು ನನಗೆ ಮಾಹಿತಿ ಇಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃ ಎಪಿಪಿ ರವರರಿಂದ</u>**

6) ದಿ:30-03-2021 ರಂದು ನಾನು, 2 ನೇ ಆರೋಪಿ ಮತ್ತು ಚಾಸಾ-14 ರವರು ಸೇರಿಕೊಂಡು ನಮ್ಮೂರಿನಿಂದ ಬೆಂಗಳೂರಿಗೆ ಲಾರಿಯಲ್ಲಿ ಈರುಳ್ಳಿ ತೆಗೆದುಕೊಂಡು ಹೋರಟಿದ್ದೇವು ಎಂದರೆ ಸರಿ. ಮನಗೂಳಿ ಹತ್ತಿರ ಎನ್ ಎಚ ರಸ್ತೆ ಮೇಲೆ ಟ್ರಕನ ಟಾಯರಗಳು ಬಸ್ಟವಾಗಿದ್ದವು ಎಂದರೆ ಸಾಕ್ಷಿ ಕಾರಿನ ಚಾಲಕ ಹಿಂದಿನಿಂದ ಬಂದು ಟ್ರಕಗೆ ಡಿಕ್ಕಿಗೆ ಪಡಿಸಿದ್ದರಿಂದ ಟ್ರಕಿನ ಟಾಯರಗಳು ಬಸ್ಟ ಆಗಿದ್ದವು ಎಂದು ನುಡಿಯುತ್ತಾರೆ. ನಮ್ಮ ಟ್ರಕಿನ ಟಾಯರಗಳು ಬಸ್ಟ ಆಗಿದ್ದರಿಂದ 2 ನೇ ಆರೋಪಿ ತನ್ನ ಟ್ರಕನ್ನು ಹೆದ್ದಾರಿ ಮೇಲೆ ನಿಲ್ಲಿಸಿದ್ದಾ ಎಂದರೆ ಸರಿ. ಆಗ ಹಿಂದಿನಿಂದ ಕಾರ ಚಾಲಕ ಬಂದು ನಮ್ಮ ಟ್ರಕಿಗೆ ಬೆಳಿಗ್ಗೆ 9.00 ಗಂಟೆಗೆ ಡಿಕ್ಕಿ ಪಡಿಸಿದ್ದಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ನೇ ಆರೋಪಿಯ ಲಾರಿ ಚಲಿಸುತ್ತಿತ್ತು ಅಂತಾ ನುಡಿಯುತ್ತಾರೆ. ನಂತರ ನಾವು ಟ್ರಕಿನಿಂದ ಇಳಿದು ಹೋಗಿ ನೋಡಿ ಸದರಿ ಕಾರ ನಂಬರ ನೋಡಲಾಗಿ ಅದು KA-35/B-8766 ಅಂತಾ ಇತ್ತು ಎಂದರೆ ಸರಿಯಲ್ಲ. ಆಗ ಅಲ್ಲಿ ನೇರದಿದ್ದ ಜನ ಕಾರನಲ್ಲಿ ಇದ್ದ ವ್ಯಕ್ತಿಯನ್ನು ಹೊರಗೆ ತೆಗೆದಾಗ ಆತ ಮಾತುನಾಡುವ ಸ್ಥಿತಿಯಲ್ಲಿ ಇರಲಿಲ್ಲ ಆತನ ತಲೆಗೆ, ಮುಖಕ್ಕೆ ಮತ್ತು ಹಣೆಗೆ

ಗಾಯಗಳು ಆಗಿದ್ದವು ಎಂದರೆ ಸರಿ. ಸದರಿ ವ್ಯಕ್ತಿ ಬಳಿ ಗುರುತಿನ ಚೀಟಿ ಇದ್ದು ಅದನ್ನು ತೆಗೆದು ನೋಡಿದ್ದಾಗ ಆತನ ಹೆಸರು ಶ್ರೀನಿವಾಸ ತಂ.ಕುಬೇರ ಗುಪ್ತಾ ಸಾ.ಹೊಸಪೇಟೆ ಅಂತಾ ತಿಳಿತು ಎಂದರೆ ಸರಿ. 2 ನೇ ಆರೋಪಿ ತನ್ನ ಲಾರಿ ಟಾಯರಗಳು ಬಸ್ಟ ಆಗಿದ್ದರಿಂದ ತನ್ನ ಲಾರಿಯನ್ನು ಯಾವುದೇ ಇಂಡಿಕೇಟರ ಇಲ್ಲದೆ ಅಥವಾ ಸುರೇಕ್ಷತ ಕ್ರಮ ತೆಗೆದುಕೊಳ್ಳದೆ ಹೆದ್ದಾರಿ ಮೇಲೆ ನಿಲ್ಲಿಸಿದ್ದರಿಂದ 1 ನೇ ಆರೋಪಿ ತಾನು ಚಲಾಯಿಸಿಕೊಂಡ ಬಂದ ಕಾರನ್ನು ಟ್ರಕಿಗೆ ಡಿಕ್ಕಿ ಪಡಿಸಿದ್ದರಿಂದ 2 ನೇ ಆರೋಪಿ ನಿರ್ಲಕ್ಷತನದಿಂದ ಸದರಿ ಅಪಘಾತವಾಗಿತ್ತದೆ ಎಂದರೆ ಸರಿಯಲ್ಲ. ನಂತರ ನಾನು ಮನಗೂಳಿ ಪೋಲಿಸ ಠಾಣೆಗೆ ಹೋಗಿ ಅಪಘಾತ ಕುರಿತು ಚಾಸಾ-9 ರವರಿಗೆ ಮಾಹಿತಿ ನೀಡಿ ಅವರಿಂದ ಕನ್ನಡದಲ್ಲಿ ದೂರನ್ನು ಬರೆಸಿ ಹಿಂದಿಯಲ್ಲಿ ತಿಳಿದುಕೊಂಡು ಸಹಿ ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿ:03-04-2021 ರಂದು 1 ನೇ ಆರೋಪಿ ಬೆಳಗಾವದ ಕೆ.ಎಲ್.ಈ ಆಸ್ಪತ್ರೆಯಲ್ಲಿ ದಿ:31-03-2021 ರಂದು ರಾತ್ರಿ 8.39 ಗಂಟೆ ತೀರಿಕೊಂಡಿದ್ದಾ ಅಂತಾ ನನಗೆ ಗೊತ್ತಾಯಿತ್ತು ಎಂದರೆ ಸರಿಯಲ್ಲ. ಆ ಕುರಿತು ನನ್ನ ಮರು ಹೇಳಿಕೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ನಮ್ಮೂರಿನವನು ಅಲ್ಲಾ ಎಂದರೆ ಸರಿ. 2 ನೇ ಆರೋಪಿ ನನ್ನ ಸ್ನೇಹಿತ ಅಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮುಖ ಪರಿಚಯ ಎಂದು ನುಡಿಯುತ್ತಾರೆ. 2 ನೇ ಆರೋಪಿಯನ್ನು ಶಿಕ್ಷೆಯಿಂದ ಪಾರು ಮಾಡಲು ನಾನು ದೂರು ನೀಡಿದ್ದರೂ ಸಹ ಮತ್ತು ಘಟನೆಯನ್ನು ಕಣ್ಣಾರೆ ನೋಡಿದ್ದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

7) ಚಾಸಾ-9 ರವರನ್ನು ನಾನು ಯಾವತ್ತು ನೋಡಿರುವುದಿಲ್ಲ.

**ಮರುವಿಚಾರಣೆ ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.

ಸಿ.ಸಿ.ನಂ.2171/2021
ಸಿಡಬ್ಲ್ಯು: 01 ಪಿಡಬ್ಲ್ಯು:01